# 10ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ

ದಿನಾಂಕ 26ನೇ ದಿನ ಸೆಪ್ಟೆಂಬರ್ ಮಾಹೆ 2013

**ಉಪಸ್ಥಿತರುಃ ಶ್ರೀ.ಎಸ್.ಎಂ.ಕಲಾಲ, ಬಿ.ಕಾಂ.,ಎಲ್.ಎಲ್.ಬಿ.,(ವಿಶೇಷ)**
**10ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳು**

**ಸಿ.ಸಿ. ನಂ.22963/2008**

| | | |
|---|---|---|
| **ಫಿರ್ಯಾದುದಾರರುಃ** | | **ಮಹದೇವಪುರ** ಪೊಲೀಸ್ ಠಾಣೆ |

**ವಿರುದ್ಧ**

| | | |
|---|---|---|
| **ಆರೋಪಿಗಳುಃ** | **2.** | ಗಂಗಾಧರ 38 ವರ್ಷ, |
| | **3.** | ಆನಂದ ಬಿನ್ ಲಕ್ಷ್ಮಯ್ಯ 36 ವರ್ಷ, |
| | **4.** | ಪ್ರಕಾಶ, 34 ವರ್ಷ |
| | **5.** | ರಾಜ, 38 ವರ್ಷ |
| | | ಎಲ್ಲರೂ ವಾಸಃ ಬೈರಸಂದ್ರ, ಬೆಂಗಳೂರು |
| | **1.** | **ಮುನಿರಾಜ - ಮೃತಪಟ್ಟಿರುತ್ತಾರೆ.** |

## ತೀರ್ಪು

**ದಂ.ಪ್ರ.ಸಂ. ಕಲಂ 355ರ ಅಡಿ**

| | |
|---|---|
| 1. **ಪ್ರಕರಣದ ಕ್ರಮ ಸಂಖ್ಯೆ** | **ಮೇಲಿನಂತೆ** |
| 2. **ಅಪರಾಧವಾದ ದಿನಾಂಕ** | **20/09/2007** |
| 3. **ಫಿರ್ಯಾದುದಾರನ ಹೆಸರು** | **ಶ್ರೀಮತಿ.ಗೀತಾ** |
| 4. **ಆರೋಪಿತರ ಹೆಸರು** | **ಮೇಲಿನಂತೆ** |
| 5. **ಅಪರಾಧದ ವಿವರಣೆ** | **ಕಲಂ. 143, 341, 323, 504, 354 ಸಹಿತ 149 ಐ.ಪಿ.ಸಿ.** |
| 6. **ಆರೋಪಿಯ ಪ್ಲೀ** | **ತಪ್ಪು ಮಾಡಿಲ್ಲ** |
| 7. **ಅಂತಿಮ ಆದೇಶ** | **ಆರೋಪಿತರ ಬಿಡುಗಡೆ** |
| 8. **ಆದೇಶದ ದಿನಾಂಕ** | **26-09-2013** |
| 9. **ತೀರ್ಪಿಗೆ ಹೇಳಿದಂತಹ ಸಂಕ್ಷಿಪ್ತ ಕಾರಣಗಳು** | **ಕೆಳಗಿನಂತೆ** |

## ಸಾರಾಂಶ

ಸದರಿ ಪ್ರಕರಣದಲ್ಲಿ ಮಹದೇವಪುರ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು ಆರೋಪಿಯ ವಿರುದ್ದ ಭಾ.ದ.ಸಂ ಕಲಂ. 143, 341, 323, 354, 504 ಸಹಿತ 149ರ ಅಡಿ ಆರೋಪವೆಸಾಗಿರುತ್ತಾರೆಂದು ಆರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. ಅಭಿಯೋಜನೆ ಪಕ್ಷದವರ ಕೇಸಿನ ಸಂಕ್ಷಿಪ್ತ ಮಾಹಿತಿ ಕೆಳಗಿನಂತೆ ಇರುತ್ತದೆಃ

ದಿಃ 20-9-2007ರಂದು ಮದ್ಯಾಹ್ನ 3.00 ಗಂಟೆಗೆ ಮಹದೇವಪುರದ ಕಗ್ಗದಾಸಪುರ ಮುಖ್ಯ ರಸ್ತೆ ಸಾಕ್ಷಿ.1ರವರ ಸರ್ವೀಸ್ ಸ್ಟೇಷನ್ ಹತ್ತಿರ ಆರೋಪಿತರು ಆಕ್ರಮವಾಗಿ ಗುಂಪು ಕಟ್ಟಿಕೊಂಡು ಬಂದು ಕೂಗಾಡುತ್ತಿದ್ದು ಅದನ್ನು ನೋಡಿ ಸಾಕ್ಷಿ.1ರವರು ಪ್ರಶ್ನಿಸಿದಾಗ ಸಾಕ್ಷಿ.1ರವರಿಗೆ ಅವಾಚ್ಯ ಶಬ್ಧಗಳಿಂದ ಬೈದು ಆರೋಪಿ 4 ಮತ್ತು 5ದವರು ಸಾಕ್ಷಿ.1ರವರನ್ನು ಮುಂದೆ ಹೋಗದಂತೆ ಆಕ್ರಮವಾಗಿ ಅಡ್ಡಗಟ್ಟಿ ತಡೆದಾಗ 3ನೇ ಆರೋಪಿ ಕೈಗಳಿಂದ ಅವರ ಕೆನ್ನೆಗೆ ಹೊಡೆದಿದ್ದು ಹಾಗೂ 1ನೇ ಆರೋಪಿ ಸಾಕ್ಷಿ.1ರವರ ಕೈಗಳನ್ನು ಹಿಡಿದು ಎಳೆದಾಡಿ ಕೆಳಕ್ಕೆ ಬೀಳಿಸಿ ಕಾಲುಗಳಿಂದ ಒದ್ದು 2ನೇ ಆರೋಪಿ ಕೈಗಳಿಂದ ಅವರ ಬೆನ್ನಿಗೆ ಗುದ್ದಿ ಅವರ ಜಾಕೀಟ್‌ನ್ನು ಹಿಡಿದು ಹರಿದು ಹಾಕಿ ಅವರಿಗೆ ಮಾನಭಂಗವನ್ನುಂಟು ಮಾಡಲು ಪ್ರಯತ್ನಿಸಿದ್ದರಿಂದ ಪೊಲೀಸರು ಆರೋಪಿತರ ವಿರುದ್ದ ಮೇಲ್ಕಂಡ ಕಲಂಗಳ ಪ್ರಕಾರ ದೊಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು ಇರುತ್ತದೆ.

3. ಸದರಿ ಕೇಸಿನಲ್ಲಿ ಆರೋಪಿತರು ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿದ್ದು ನಂತರ 1ನೇ ಆರೋಪಿ ಮೃತಪಟ್ಟಿರುತ್ತಾರೆ. ಅಭಿಯೋಜನೆ ಪಕ್ಷದವರ ದಾಖಲಾತಿಗಳನ್ನು ಉಳಿದ ಆರೋಪಿತರಿಗೆ ನೀಡಿರುತ್ತೆ ಹಾಗೂ ಅವರ ಮೇಲಿರುವ ಆರೋಪಣೆಯನ್ನು ಓದಿ, ಹೇಳಿ, ಕೇಳಲಾಯಿತು, ಆರೋಪಿತರು ತಾವು ತಪ್ಪು ಮಾಡಿಲ್ಲವೆಂದು ಹಾಗೂ ವಿಚಾರಣೆಯಾಗ ಬೇಕೆಂದು ಕೇಳಿಕೊಂಡಿದ್ದರಿಂದ ಅಭಿಯೋಜನೆ ಪಕ್ಷದವರ ಸಾಕ್ಷಿ ವಿಚಾರಣೆಗೆ ದಿನಾಂಕವನ್ನು ಗೊತ್ತುಪಡಿಸಲಾಯಿತು. ಅಭಿರ್ಯೋಜನೆ ಪಕ್ಷದವರು ತಮ್ಮ ಕೇಸಿನ ರುಜುವಾತಿಗಾಗಿ ಪ್ರಾ.ಸಾ.1 ಅಂತ ಈ ಕೇಸಿನ ಫಿರ್ಯಾದಿಯನ್ನು ಸಾಕ್ಷಿ ಮಾಡಿಸಿದ್ದು

ಮತ್ತು ನಿಶಾನೆ ಪಿ.1 ಮತ್ತು 2 ಅಂತ ದಾಖಲಾತಿಗಳನ್ನು ನಿಶಾನೆಯಾಗಿ ಗುರುತಿಸಿಕೊಂಡಿರುತ್ತಾರೆ. ಇಲ್ಲಿ ಫಿರ್ಯಾದಿಯೆ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದು, ಉಳಿದ ಸಾಕ್ಷಿದಾರರಿಗೆ ಸಮನ್ಸ್ ನೀಡಲು ಕೋರಿದ ಮಾನ್ಯ ಹಿರಿಯ ಎ.ಪಿ.ಪಿ. ಅವರ ಮನವಿಯನ್ನು ತಿರಸ್ಕರಿಸಿ ಅದರಿಂದ ಯಾವುದೇ ಪ್ರಯೋಜನವಾಗಲಾರದು ಅಂತ ಅಭಿಯೋಜನ ಪಕ್ಷದವರ ಸಾಕ್ಷಿಯನ್ನು ಮುಕ್ತಯುಗೊಳಿಸಲಾಯಿತು. ಆರೋಪಿತರ ವಿರುದ್ದ ಯಾವುದೇ ಸಾಕ್ಷಿ ಇಲ್ಲದೆ ಇರುವ ಕಾರಣ ದಂ.ಪ್ರ.ಸಂ.ಕಲಂ 313ರ ಅಡಿಯಲ್ಲಿ ಪಡೆಯಬೇಕಾದ ಆರೋಪಿತರ ಹೇಳಿಕೆಯನ್ನು ಹೊರತು ಪಡಿಸಲಾಯಿತು. ನಂತರ ಎರಡು ಕಡೆಯವರ ವಾದವನ್ನು ಆಲಿಸಲಾಯಿತು.

## ಕಾರಣಗಳು

4. ಅಭಿಯೋಜನೆ ಪಕ್ಷದವರು ತಮ್ಮ ಕೇಸಿನ ರುಜುವಾತಿಗಾಗಿ ಪ್ರಾ.ಸಾ.1 ಅಂತ ಈ ಕೇಸಿನ ಫಿರ್ಯಾದಿಯ ಸಾಕ್ಷಿ ಮಾಡಿಸಿದ್ದು, ಸದರಿಯವರೇ ಆರೋಪಿತರು ತಮ್ಮ ಮೇಲೆ ಆಕ್ರಮ ಕೂಟ ಕಟ್ಟಿಕೊಂಡು ಬಂದು ತನ್ನನ್ನು ಅಡ್ಡಗಟ್ಟಿ ತಡೆದು ಅವಾಚ್ಯ ಶಬ್ಧಗಳಿಂದ ಬೈದು ಕೈಗಳಿಂದ ಹೊಡೆದು ತಮ್ಮ Jacketನ್ನು ಹಿಡಿದು ಎಳೆದಾಡಿ ಅವಮಾನ ಪಡಿಸಿದ ಕುರಿತಂತೆ ನಿ.ಪಿ.1ರಂತೆ ದೂರನ್ನು ಕೊಟ್ಟಿದ್ದರೂ ಮತ್ತು ನಿ.ಪಿ.2ರ ಮಹಜರ್ ಕಾಲಕ್ಕೆ ಹಾಜರಿದ್ದು ಮಹಜರ್‌ಗೆ ಸಹಿ ಮಾಡಿದ್ದರೂ ಪ್ರತಿಕೂಲವಾಗಿ ಸಾಕ್ಷಿ ನುಡಿದು ತಾನು ನಿ.ಪಿ.1ರಂತೆ ಯೊವುದೇ ದೂರನ್ನು ಕೊಟ್ಟಿಲ್ಲ ಹಾಗೂ ನಿ.ಪಿ.2ರಂತೆ ಮಹಜರ್ ಕಾಲಕ್ಕೆ ಹಾಜರಿರಲಿಲ್ಲ ಅಂತ ಹೇಳಿದ್ದು, ಮುಂದುವರೆದು ತಾನು ಹಾಗೂ ಆರೋಪಿತರು ರಾಜಿ ಮಾಡಿಕೊಂಡಿರುವ ಅಂಶವನ್ನು ಹೇಳಿದ್ದು, ಇಲ್ಲಿ ಲಭ್ಯವಿರುವ ಸಾಕ್ಷಿಯನ್ನು ಗಮನಿಸಿದಾಗ ಅಭಿಯೋಜನಾ ಪಕ್ಷದವರು ತಮ್ಮ ಕೇಸ್‌ನ್ನು ನಿಸ್ಸಂದೇಹವಾಗಿ ರುಜುವಾತು ಪಡಿಸಲು ವಿಫಲರಾಗಿದ್ದು ಹಾಗೂ ರಾಜಿ ಆಗಿರುವ ಅಂಶವನ್ನು ಗಣನೆಗೆ ತೆಗೆದುಕೊಂಡು ನಿಯಮದಂತೆ ಸಂದೇಹದ ಲಾಭವನ್ನು ಆರೋಪಿತರ ಪರ ನೀಡುತ್ತಾ ಈ ಕೆಳಕಂಡಂತೆ ಆದೇಶಿಸಲಾಗಿದೆಃ

**ಆದೇಶ**

***2 ರಿಂದ 5ನೇ ಆರೋಪಿತರನ್ನು ದಂ.ಪ್ರ.ಸಂ. ಕಲಂ 248(1)ರ ಅಡಿಯಲ್ಲಿ ಭಾ.ದಂ.ಸಂ. ಕಲಂ 143, 341, 323, 504, 354 ಸಹಿತ 149ರ ಮೇರೆಗಿನ ಶಿಕ್ಷಾರ್ಹವಾದ ಅಪರಾಧಗಳಿಂದ ಬಿಡುಗಡೆ ಮಾಡಲಾಗಿದೆ. ಆರೋಪಿತರ ಜಾಮೀನು ಮುಚ್ಚಳಿಕೆಯನ್ನು ರದ್ದು ಪಡಿಸಲಾಗಿದೆ. ಠಾಣಾ ಮಾಲು ಪಟ್ಟಿ ಸಂಖ್ಯೆ 99/2007ರಲ್ಲಿ ಅಮಾನತ್ತು ಪಡಿಸಿಕೊಂಡಿರುವ ವಸ್ತುವನ್ನು ಕಿಮ್ಮತ್ತು ರಹಿತವೆಂದು ಅಪೀಲು ಅವಧಿಯ ನಂತರ ನಾಶಪಡಿಸುವಂತೆ ತನಿಖಾಧಿಕಾರಿಗಳಿಗೆ ಈ ಮೂಲಕ ಆದೇಶಿಸಲಾಗಿದೆ ಅಥವಾ ಕಚೇರಿಯವರು ಅದನ್ನು ತರಸಿಕೊಂಡು ನಾಶಪಡಿಸಲು ಈ ಮೂಲಕ ಸೂಚಿಸಲಾಗಿದೆ.***

(ಶೀಘ್ರಲಿಪಿಗಾರನಿಗೆ ಉಕ್ತಲೇಖನ ಕೊಟ್ಟು, ಅತನು ಬೆರಳಚ್ಚು ಮಾಡಿದ ನಂತರ, ನಾನು ಖುದ್ದು ಪರಿಶೀಲಿಸಿ, ತಪ್ಪುಗಳನ್ನು ಸರಿ ಪಡಿಸಿ ದಿನಾಂಕ 26ನೇ ಸೆಪ್ಟೆಂಬರ್ 2013 ರಂದು ತೆರೆದ ನ್ಯಾಯಾಲಯದಲ್ಲಿ ಬಹಿರಂಗ ಪಡಿಸಿದ್ದೆನೆ).

**(ಎಸ್.ಎಂ.ಕಲಾಲ)**
**10ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳು,**
**ಬೆಂಗಳೂರು.**

## ಅನುಬಂಧ

**ಸಾಕ್ಷಿಗಳ ಪಟ್ಟಿಃ**

| **ಅಭಿಯೋಜನೆ ಪರಃ** | **ಆರೋಪಿತರ ಪರಃ** |
|---|---|
| ಪ್ರಾ.ಸಾ.1 ಶ್ರೀಮತಿ.ಗೀತಾ | -ಇಲ್ಲ- |
| **ನಿಶಾನೆಯಾಗಿ ಗುರುತಿಸಲ್ಪಟ್ಟ ದಾಖಲೆಗಳುಃ** | |
| ನಿ.ಪಿ.1 ದೂರು | |
| ನಿ.ಪಿ.1(ಎ) ಪ್ರಾ.ಸಾ.1ರವರ ಸಹಿ. | |
| ನಿ.ಪಿ.2 ಮಹಜರ್ | |
| ನಿ.ಪಿ.2(ಎ) ಪ್ರಾ.ಸಾ.1ರವರ ಸಹಿ. | |
| **ಗುರುತಿಸಲ್ಪಟ್ಟ ಮುದ್ದೆ ಮಾಲುಗಳುಃ** | |
| -ಇಲ್ಲ- | -ಇಲ್ಲ- |

**10ನೇ ಅಪರ ಮುಖ್ಯ ಮಹಾನಗರ**
**ದಂಡಾಧಿಕಾರಿಗಳು, ಬೆಂಗಳೂರು.**